'ಮಗನೆ ನೀನು ಕಥೆಗಳನ್ನು ಬರೀತಿರಬೌದು, ಆದರೆ ನಿನ್ನನ್ನು ಬರೆದ ನಾನು ನಿನಗಿಂತ ದೊಡ್ಡ ಕಥೆಗಾರ ತಿಳಕೊ' ಎಂದು ಚಾವಟಿ ಬೀಸಿದ್ದು ಯಾರೆಂದರೆ ನನ್ನ ತಂದೆ. ಅದು ಯಾವುದೊ ಒಂದು ಜಾಣತನದ ಮಾತಿಗೆ ಪ್ರತಿಯಾಗಿ. ಹೌದು ತಂದೆ ಹಾಲಪ್ಪ. ನನ್ನೆದೆಯೊಳಗೆ ಅಚ್ಚಳಿಯದೆ ಉಳಿದಿರುವ ಗೊಮ್ಮಟ ನನ್ನಪ್ಪ. ಬಯಲು ರಂಗಮಂದಿರದಂತಿದ್ದ ಆತ ಅಜಾನುಬಾಹು ಸುರಸುಂದರಾಂಗನಿದ್ದ. ಆತ ಎಲ್ಲೋ ಅವತಾರವೆತ್ತಿ ಎಲ್ಲೋ ಬೆಳೆದು, ಎಲ್ಲೋ ಮದುವೆಯಾಗಿ ನಮ್ಮೆಲ್ಲರ ಜನಕಮಹಾರಾಜನಾಗಿ ಬೀಗುತ್ತಿದ್ದ. ಅರೆಕಾಲಿಕ ಜಮೀನ್ದಾರನಾಗಿದ್ದ. ಅಕ್ಷರಸ್ಥ ತರುಣಿಗೆ ಪ್ರೇಮಪತ್ರಗಳನ್ನು ಬರೆಯಲೆಂದೇ ಓದು ಬರಹ ಕಲಿತಿದ್ದ. ಆ ಒಂದು ಹಿಡಿ ಅಕ್ಷರಗಳ ಬೆಳಕಿನಲ್ಲಿ ರಾಮಾಯಣ ಮಹಾಭಾರತದ ವಿವಿಧ ನಮೂನೆಗಳನ್ನೂ ಇನ್ನೆಷ್ಟೊ ಮುದ್ರಿತ ವಗೈರೆಗಳನ್ನೂ ಅರಗಿಸಿಕೊಂಡಿದ್ದ. ರಕ್ತಗತವಾಗಿದ್ದ ಕೃತಿಗಳು ಅಲ್ಲಿಯೆ ಜೀವಸಮಾಧಿಯಾಗಲು ಸಾಧ್ಯವೆ! ಹಪಹಪಿಸುತ್ತಿದ್ದ ಕಾರಣಕ್ಕೆ ತನ್ನ ನಿರೂಪಣಾ ಕೌಶಲ್ಯದ ಮೂಲಕ ಅವುಗಳಿಗೆ ಬೇರೊಂದು ಆಕಾರ ಕಲ್ಪಿಸಿ ಆಲಿಸುವ ಪ್ರಪಂಚಕ್ಕೆ ದಾಸೋಹ ಮಾಡುವ ಧಾರಾಳಿ ತಾನಾಗಿದ್ದ. ಹ್ಞಾಂ! ಅಂದ ಹಾಗೆ ನಮ್ಮ ಮನೆಯಲ್ಲಿ ಈ ಸೃಜನಶೀಲ ಪುಂಗವ ಮಾತ್ರವಲ್ಲದೆ ಮೂರಕ್ಕಿಂತ ಕಡಿಮೆ ಎರಡಕ್ಕಿಂತ ಹೆಚ್ಚು ಮುದುಕಿಯರಿದ್ದರು. ಅವರೆಲ್ಲರು ತಮ್ಮೆದೆಯ ಕೊಟ್ಟಿಗೆಗಳಲ್ಲಿ ಅಸಂಖ್ಯಾತ ಕಥೆಗಳನ್ನು ಕಟ್ಟಿ ಪೋಷಿಸುತ್ತಿದ್ದರು (ನನ್ನ 'ಕಥೆ ಹೇಳೋ ಕರಿಯಜ್ಜ' ಕತೆ ಹಾಗೂ 'ಶಾಮಣ್ಣ', 'ಆರೋಹಣ' 'ಅರಮನೆ' ಕಾದಂಬರಿಗಳಲ್ಲಿ ಈ ಜಾಯಮಾನದ ಪಾತ್ರಗಳು ಮೈದಳೆದಿವೆ). ಜಗಳ ದುಕ್ಕ ದುಮ್ಮಾನಗಳಿಗೆ ಕಾವ್ಯಾತ್ಮಕ ಪ್ರಭಾವಳಿಗಳನ್ನು ತೊಡಿಸುತ್ತಿದ್ದರು. ಹೀಗಾಗಿ ಅವರ ತೂಕಡಿಕೆ ಕನಸು, ಕನವರಿಕೆ, ಆಕಳಿಕೆಗಳೆಲ್ಲವೂ ಸಂಕಥಾವಿನೋದದೋಲ್ ರಂಜಿಸುತ್ತಿದ್ದವು. ಇವೊಂದೆ ಅಲ್ಲದೆ ಸರ್ವಋತು ದೆವ್ವ, ದೇವರುಗಳಿಗೆ ಕೊರತೆ ಇರಲಿಲ್ಲ. ನಮ್ಮ ಓಣಿ ಅವುಗಳ ಆಟದ ಮೈದಾನವಾಗಿತ್ತು, ದೇವತೆಗಳು ಪ್ರತಿ ಹುಣ್ಣುಮೆಯಂದು ಅವರಿವರ ದೇಹಗಳಲ್ಲೂ ದೆವ್ವಗಳು ಪ್ರತಿ ಅಮವಾಸೆಗಳಂದು ಅವರಿವರ ಶರೀರಗಳಲ್ಲೂ ತಾತ್ಕಾಲಿಕವಾಗಿ ತಮ್ಮ ಕ್ರಿಯಾಕಲಾಪ ನಡೆಸುತ್ತಿದ್ದವು. ನಮ್ಮೋಣಿಯಲ್ಲಿದ್ದ ಪ್ರತಿ ನರಮಾನವ ಕಥೆಗಳಿಂದ ಮಾಡಲ್ಪಟ್ಟಂತಿದ್ದ. ಒಬ್ಬೊಬ್ಬ ಮುದುಕಿ ಜಾನಪದ ವಿಶ್ವವಿದ್ಯಾಲಯಕ್ಕಿಂತ ಕಡಿಮೆ ಇರಲಿಲ್ಲ. ಇಂಥ ಸ್ವಯಂಘೋಷಿತ ಅಕಾಡೆಮಿಗಳ ನಡುವೆ ಬಾಲ್ಯ ಅನುಭವಿಸಿದ ನಾನು ಕಥೆಗಾರನಾಗದೆ ಕಾರಕೂನನಾಗಲು ಸಾಧ್ಯವೆ, ನೀವೇ ಹೇಳಿ. ಈ ಎಲ್ಲಾ ಸಂಸರ್ಗ ಸಾಂಕ್ರಾಮಿಕದ ಪರಿಣಾಮ ಪವಾಡ ಏನೆಂದು ಹೇಳಲಿ ಶಿವನೆ!

ಮೂರ್ನಾಲ್ಕು ವರ್ಷ ವಯೋಮಾನದ ನನ್ನ ಎಳೆ ಸರೀರದಲ್ಲಿ ಕಂಡುಂಡ ಸತ್ಯಗಳು ವದಂತಿ ಕತೀಕತಿಗಳು ವಟ್ಟರಿಸಿದ್ದವು. ಇದರಿಂದ ನನ್ನ ಬಾಲ್ಯ ಚಪಳೆ ಸೊಡರ ಕುಡಿಯಂತೆ ಹಲವು ವಿಧದ ನೃತ್ಯಾಭ್ಯಾಸ ಮಾಡುತ್ತಿತ್ತು. ಸಿಕ್ಕಸಿಕ್ಕದ್ದನ್ನು ಅರಗಿಸಿಕೊಳ್ಳಲು ನನ್ನ ದೇಹಕ್ಕಂಟಿದ್ದ ಪಂಚೇಂದ್ರಿಯಗಳ ನಡುವೆ ಪೈಪೋಟಿ ಇತ್ತು...

ಅದಲ್ಲದೆ ನಮ್ಮ ಕುಲಕಸುಬು ಕುಂಬಾರಿಕೆ ನನ್ನಲ್ಲಿ ಚಿತ್ರಕಲಾವಿದನ ಬಿತ್ತನೆ ನಡೆಸಿತ್ತಷ್ಟೆ, ಅರವತ್ನಾಲ್ಕು ಕಲೆಗಳನ್ನು ಮಾತ್ರವಲ್ಲದೆ ಅರವತ್ತೈದನೆ ಕಲೆಯ ಅನ್ವೇಷಣೆ ನಡೆಸಿದ್ದೆ ಎಂದರೆ ನೀವೆ ಲೆಕ್ಕಹಾಕಿ ಶಿವನೆ. ಇದ್ದಿಲ ನೆರವಿನಿಂದ ಸಿಕ್ಕಸಿಕ್ಕ ಬಿಳಿಗೋಡೆಗಳ ಮೇಲೆ ಏನೆಲ್ಲ ಚಿತ್ರ ವಿಚಿತ್ರಗಳನ್ನು ಗೀಚಿ ಅವರಿವರು ಹಾಕುತ್ತಿದ್ದ ಹಿಡಿಹಿಡಿ ಶಾಪಗಳನ್ನು ಅಲಂಕರಿಸಿಕೊಳ್ಳುತ್ತಿದ್ದೆ. ದುರ್ಯೋಧನನಾಗುವ ಹಾದಿಯಲ್ಲಿದ್ದ ಕಾರಣಕ್ಕೆ ಶತ್ರುಗಳನ್ನು ನಿಶ್ಶೇಷಗೊಳಿಸಲು ಆಸ್ತಿಪಾಸ್ತಿ